ವಿಜಯವಾಣಿ
ಕನ್ನಡಿಗರ ಧ್ವನಿ

# ಯಶಸ್ಸಿಗೆ ಪರಿಶ್ರಮ ಮುಖ್ಯ

## ■ ಜೈನ್ ವಿವಿ ಘಟಿಕೋತ್ಸವದಲ್ಲಿ ನಿಲೇಕಣಿ




ಜೈನ್ ವಿವಿ ಘಟಿಕೋತ್ಸವದಲ್ಲಿ ಪದವಿ ಸ್ವೀಕರಿಸಿದ ವಿದ್ಯಾರ್ಥಿಗಳ ಸಂಭ್ರಮ.

**ಬೆಂಗಳೂರು:** ಯಶಸ್ಸು ಒಬ್ಬರ ಅದೃಷ್ಟಕ್ಕಿಂತ ಅವರ ಪರಿಶ್ರಮವನ್ನು ಅವಲಂಬಿಸಿರುತ್ತದೆ ಎಂದು ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ ಅಧ್ಯಕ್ಷ ನಂದನ್ ನಿಲೇಕಣಿ ಅಭಿಪ್ರಾಯಪಟ್ಟರು.

ಗುರುವಾರ ಜೈನ್ ವಿಶ್ವವಿದ್ಯಾಲಯದ 3ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ನಮ್ಮ ಗುರಿಗಳನ್ನು ನಾವೇ ನಿರ್ಧರಿಸಬೇಕೇ ಹೊರತು ಮತ್ಯಾರೂ ನಿರ್ಧರಿಸಲು ಸಾಧ್ಯವಿಲ್ಲ. ನಿಮ್ಮೊಳಗೆ ಇರುವ ಸವಾಲನ್ನು ಎದುರಿಸಿದರೆ ಮಾತ್ರ ಜಗತ್ತನ್ನು ಎದುರಿಸಲು ಸಾಧ್ಯವಾಗುತ್ತದೆ. ಸಮಯ ನಿರ್ವಹಣೆಯನ್ನು ಸರಿಯಾಗಿ ನಿಭಾಯಿಸಿದ ವ್ಯಕ್ತಿ ವೃತ್ತಿ ಜೀವನದಲ್ಲಿ ಯಶಸ್ಸನ್ನು ಸಾಧಿಸುತ್ತಾನೆ ಎಂದು ಹೇಳಿದರು.

ಘಟಿಕೋತ್ಸವದಲ್ಲಿ 2281 ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರ ಸ್ವೀಕರಿಸಿದರು. ರ್‍ಯಾಂಕ್ ಮತ್ತು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಇದೇ ಮೊದಲ ಬಾರಿಗೆ ಹೆಲ್ತ್ ಸೈಕಾಲಜಿ, ಫಿಲಾಸಫಿ, ಬಯೋಟೆಕ್ನಾಲಜಿ, ಇಂಗ್ಲಿಷ್ ವಿಷಯಗಳಲ್ಲಿ ಎಂ.ಎನ್. ಬಿಂದುಶ್ರೀ, ಮೈತ್ರಿ, ಸಿ. ಆರ್. ರೇಖಾ, ಪ್ರಕೃತಿ ಎಂಬ ವಿದ್ಯಾರ್ಥಿನಿಯರಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಯಿತು.

ಜೈನ್ ವಿಶ್ವವಿದ್ಯಾಲಯ ಟ್ರಸ್ಟ್‌ನ ಅಧ್ಯಕ್ಷ ಡಾ. ಚೆನ್ನರಾಜ್ ಜೈನ್, ಡಾ. ಸಂದೀಪ್ ಶಾಸ್ತ್ರಿ, ಸುಂದರ್‌ರಾಜನ್ ಮತ್ತಿತರು ಉಪಸ್ಥಿತರಿದ್ದರು.